


ಕಲ್ಯಾಣ ಕಿರಣ



ಎಮ್ಮ ವಚನದ ಸಾಸಿರ ಪಾರಾಯಣಕ್ಕೆ ಗಾಯತ್ರಿ ಲಕ್ಷಜಪ ಸಮಬಾರದಯ್ಯಾ

ಅಕ್ಟೋಬರ್-2014 ಬೆಲೆ-20/-



108 ಅಡಿ ಬಸವಪುತ್ಥಳಿ, ಬಸವ ಕಲ್ಯಾಣ, ಜಿ|| ಬೀದರ



ಶರಣ. ಪ್ರಭಾಕರ ರೆಡ್ಡಿ, ಅಧ್ಯಕ್ಷರು, ಕೋನಪ್ಪನ ಅಗ್ರಹಾರ ಗ್ರಾ. ಪಂಚಾಯತ್, ಇವರಿಂದ ಬಸವ ಮಂಟಪಕ್ಕೆ ನಾಂದಿಪೂಜೆ



ಶರಣ. ಶ್ರೀನಿವಾಸರೆಡ್ಡಿ, ಸದಸ್ಯರು, ಕೋನಪ್ಪನ ಅಗ್ರಹಾರ ಗ್ರಾ. ಪಂಚಾಯತ್, ಇವರಿಂದ ಬಸವ ಮಂಟಪಕ್ಕೆ ನಾಂದಿಪೂಜೆ



ಅರ್ಧಏರಿರುವ ಬಸವ ಮಂಟಪ

ಕಲ್ಯಾಣದ ಜ್ಯೋತಿ

ಜ್ಯೋತಿ ಬೆಳಗುತಿದೆ ಕಲ್ಯಾಣದ ಜ್ಯೋತಿ ಬೆಳಗುತಿದೆ ॥ಪ॥

ಮನುಕುಲದ ಲೇಸನು ಬಯಸಿದ ಬಸವ ಗುರು
ಕಲ್ಯಾಣ ಪುರದೊಳು ಅಂದು ಹೊತ್ತಿಸಿದ ॥ಅ.ಪ॥

ಕಲ್ಯಾಣವೆ ಪ್ರಣತೆಯಾಗಿ ಅದರೊಳು
ಭಕ್ತಿರಸವೆ ತೈಲವಾಗಿ
ಸದಾಚಾರದ ಬತ್ತಿ ಹಿಡಿದು ಬಸವಣ್ಣನೆಂಬ ಜ್ಯೋತಿ
ಮುಟ್ಟಲು ಪರಮ ಪ್ರಕಾಶವ ಚೆಲ್ಲವರಿದು ॥1॥

ಅಲ್ಲಮ ಪ್ರಭುದೇವ ಸುಜ್ಞಾನಿ
ಶ್ರೀ ಚನ್ನಬಸವಣ್ಣ
ವೀರ ವಿರಾಗಿಣಿ ಶ್ರೀ ಅಕ್ಕಮಹಾದೇವಿ
ಗುಡ್ಡಾಪುರ ದಾನಮ್ಮ ಸತ್ಯಕ್ಕ ಹಚ್ಚಿದ ॥2॥

ಶ್ರೀ ಸಿದ್ದರಾಮೇಶ್ವರ ಮಡಿವಾಳ
ಮಾಚಯ್ಯ ಕೇತಯ್ಯ
ಹರಳಯ್ಯ-ಮಧುವಯ್ಯ ಅಂಬಿಗರ ಚೌಡಯ್ಯ
ಒಕ್ಕಲಿಗ ಮುದ್ದಣ್ಣ ಅಮುಗಯ್ಯ ಹಚ್ಚಿದ ॥3॥

ನೀಲಮ್ಮ ನಾಗಮ್ಮ ಮುಕ್ತಾಯಕ್ಕ
ಶರಣೆ ಕಲ್ಯಾಣಮ್ಮ
ಅನುಭವ ಮಂಟಪದಿ ಲಿಂಗದೇವನ ನೆನೆದು
ಹಡಪದ ಅಪ್ಪಣ್ಣ ಲಿಂಗಮ್ಮ ಹಚ್ಚಿದ ॥4॥

ಮೋಳಿಗೆ ಮಾರಯ್ಯ ಆತನ ಸತಿ
ಜ್ಞಾನಿ ಗಂಗಾದೇವಿ
ಆಯ್ದಕ್ಕಿ ಮಾರಯ್ಯ ಲಕ್ಕಮ್ಮ ಸತ್ಯಕ್ಕ
ಜೇಡರ ದಾಸಯ್ಯ ದುಗ್ಗಳೆ ಹಚ್ಚಿದ ॥5॥

ಸದ್ಗುರು ಲಿಂಗಾನಂದರ ಸಂಕಲ್ಪದಿಂ
ಬಸವಾತ್ಮಜೆ ಮಾತೆಯು
ಕಾಯಕದಿನದಂದು ಕಲ್ಯಾಣ ಪರ್ವದಿ
ಸಚ್ಚಿದಾನಂದನ ಶರಣರ ಕೂಡಿಸಲು ॥6॥

ಕಲ್ಯಾಣ ಕರೆದಿದೆ ಕಲ್ಯಾಣ ಗುರು ಬಸವಣ್ಣನ ಕಲ್ಯಾಣ
ಶರಣರಾಡಿದ ಕಲ್ಯಾಣ ವಿಶ್ವಕೆ ಬಯಸುತ ಕಲ್ಯಾಣ

ಕಲ್ಯಾಣ ಪರ್ವದಿ ನಲಿಯುವ ಬನ್ನಿ ಕ್ರಾಂತಿಗೀತೆಯ ಹಾಡುವ ಬನ್ನಿ
ಶರಣರ ಋಣವನು ತೀರಿಸಬನ್ನಿ ಬಸವಾತ್ಮಜೆಯ ಬಿನ್ನಹವಿದುವು

– ಮಾತಾಜಿ

|| ಓಂ ಶ್ರೀ ಗುರು ಬಸವಲಿಂಗಾಯ ನಮಃ ||
866666

ಸಂಪುಟ-45	ಬಸವ ಶಕೆ -881	ಪಂಚ ವಾರ್ಷಿಕ ಸದಸ್ಯತ್ವ 1000 ರೂ.
ಸಂಚಿಕೆ-10	ಅಕ್ಟೋಬರ್-2014	ವಾರ್ಷಿಕ ಚಂದಾ 200 ರೂ.

ಕಿರಣ ಗನ್ನಡಿ

ಅಕ್ಟೋಬರ್ ತಿಂಗಳಿನ ಹಬ್ಬ - ಹುಣ್ಣಿಮೆ-ಉತ್ಸವ

*ನವರಾತ್ರಿಯ ಶರಣೋತ್ಸವ ಪಾರಾಯಣ ಪ್ರಾರಂಭ- ಸೆಪ್ಟೆಂಬರ್ 25
*ಹರಳಯ್ಯ -ಮಧುವರಸರ ಸಂಸ್ಮರಣೋತ್ಸವ - ಅಕ್ಟೋಬರ್03
*ಬಸವ ಧರ್ಮದ ವಿಜಯೋತ್ಸವ - ಅಕ್ಟೋಬರ್ 4
*ಅಕ್ಕನಾಗಲಾಂಬಿಕ ಸಂಸ್ಮರಣೆ - ಅಕ್ಟೋಬರ್ 4
*13ನೆಯ ಕಲ್ಯಾಣ ಪರ್ವ ಅಕ್ಟೋಬರ್ 18, 19ಮತ್ತು 20ರಂದು
*ಚನ್ನಬಸವಣ್ಣನವರ ಜಯಂತಿ - ಅಕ್ಟೋಬರ್ 24

ಕಲ್ಯಾಣ ಕಿರಣ ಚಂದಾ

ಕಲ್ಯಾಣ ಕಿರಣದ ವಾರ್ಷಿಕ ಚಂದಾ 200ರೂ. ಪಂಚವಾರ್ಷಿಕ ಚಂದಾ 1000ರೂ. ಕಳಿಸಬೇಕು ಎನ್ನುವವರು ಎಂ.ಓ. ಮೂಲಕ, ಬ್ಯಾಂಕ್ ಡ್ರಾಫ್ಟ್ ಮೂಲಕ ಕಳಿಸಬಹುದು. ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ಹೆಸರಿಗೆ ಡಿ.ಡಿ. ತೆಗೆಸಬೇಕು.

ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್
ಬಸವ ಮಂಟಪ, 2035, 20ನೇ ಮೇನ್, ರಾಜಾಜಿನಗರ 2ನೇ ಬ್ಲಾಕ್ ಬೆಂಗಳೂರು-560010
ದೂರವಾಣಿ : 080-23131476 / 9945806297

Kalyana Kirana -Reg No.19988/70. Monthly Magazine Edited and Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-560010. Phone : 080-23131476, Send SMS to 9945806297
Email :- kalyanakirana1970@gmail.com

ಕಾಯಕವೇ ಕೈಲಾಸವೆಂಬ ಮಹಾಮಂತ್ರವನ್ನು ಸಾರಿದ ಬಸವ ಕಲ್ಯಾಣ ಸುಕ್ಷೇತ್ರದಲ್ಲಿ ಹದಿಮೂರನೆಯ

ಕಲ್ಯಾಣ ಪರ್ವ

2014ರ ಅಕ್ಟೋಬರ್ 18, 19 ಮತ್ತು 20ರಂದು

ಶರಣ ಬಂಧುಗಳಿಗೆ ಶರಣು ಶರಣಾರ್ಥಿ.

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಶರಣ ಗಣಮಣಿ ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವಾಯತರೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತೆ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲಸಂಗಮದಲ್ಲಿ ಶರಣ ಮೇಳ ಎಂಬ ಬೃಹತ್ ಧಾರ್ಮಿಕ ಸಮಾವೇಶವನ್ನು 1988ರಿಂದ ಪ್ರತಿವರ್ಷವೂ ಜನವರಿ 11 ರಿಂದ 15ರವರೆಗೆ ನಡೆಸಿಕೊಂಡು ಬರಲಾಗುತ್ತಿದ್ದು 27ನೆಯ ಶರಣ ಮೇಳವು ಇದೇ 2014ರ ಜನವರಿಯಲ್ಲಿ ಯಶಸ್ವಿಯಾಗಿ ಜರುಗಿದೆ. ಬೀದರ ಜಿಲ್ಲೆಯಲ್ಲಿರುವ ಬಸವ ಕಲ್ಯಾಣವು 12ನೆಯ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರ ಕಾರ್ಯಕ್ಷೇತ್ರವಾಗಿತ್ತು. ಲಿಂಗದೇವನ ಅನುಗ್ರಹವಾಗಿ ಇಷ್ಟಲಿಂಗದ ಪರಿಕಲ್ಪನೆ ಮೂಡಿ ಧರ್ಮಪಿತರು ಲಿಂಗಾಯತ ಧರ್ಮದ ರೂಪು ರೇಷೆ ಹಾಕಿದುದು ಕೂಡಲ ಸಂಗಮದಲ್ಲಿ. ಆ ನೀಲನಕ್ಷೆಯು ಕಾರ್ಯರೂಪಕ್ಕೆ ಬಂದುದು ಬಸವ ಕಲ್ಯಾಣದಲ್ಲಿ.

''ಕಪಿಲಸಿದ್ಧಮಲ್ಲಿಕಾರ್ಜುನಾ, ನಿಮ್ಮ ಸಂಗನ ಬಸವಣ್ಣ ಬಂದು
ಕಲ್ಯಾಣದಲ್ಲಿ ಮಹಾಮನೆಯ ಕಟ್ಟಿದಡೆ
ಮರ್ತ್ಯಲೋಕವೆಲ್ಲವೂ ಭಕ್ತಿಸಾಮ್ರಾಜ್ಯವಾಯಿತು''

ಎಂದು ಬಸವಯೋಗಿ ಸಿದ್ಧರಾಮೇಶ್ವರರು ಹೇಳುವಂತೆ, ''ಅಯ್ಯಾ, ಭಕ್ತಿಗೆ ಬೀಡಾದುದು ಕಲ್ಯಾಣ 36 ವರ್ಷ, ಅನುಭವಕ್ಕೆ ಶಿವಸದನವಾದುದು 27 ವರ್ಷ'' ಎಂದು ಧರ್ಮಪಿತರು ಸಾರುವಂತೆ ಬಸವ ಕಲ್ಯಾಣವು ವಿಕ್ರಮನಾಮ ಸಂವತ್ಸರ (ಕ್ರಿ.ಶ.1160) ದಿಂದ ರಾಕ್ಷಸನಾಮ ಸಂವತ್ಸರ (ಕ್ರಿ.ಶ.1196)ದ ವರೆಗೆ ಶ್ರೀ ಗುರು ಬಸವಣ್ಣನವರ ಪರುಷ ಪಾದದಿಂದ ಭಕ್ತಿಯ ಬೀಡಾಗಿತ್ತು. ಈ ಪವಿತ್ರ ಶರಣ ಭೂಮಿಯು ಇಂದು ನಮಗೆಲ್ಲ ಧರ್ಮಭೂಮಿ (Holy land). ಇಂಥ ಸುಕ್ಷೇತ್ರದಲ್ಲಿ ವರ್ಷಕ್ಕೊಮ್ಮೆಯಾದರೂ ಬಸವ ಭಕ್ತರು ಸಮಾವೇಶವಾಗಬೇಕೆಂದು 2002ನೆಯ ಇಸವಿಯಿಂದಲೂ ಕಲ್ಯಾಣಪರ್ವ ಎಂಬ ವಾರ್ಷಿಕ ಉತ್ಸವವನ್ನು ನಡೆಸಲಾಗುತ್ತಿದೆ. 2014ನೆಯ ಇಸವಿಯಲ್ಲಿ 13ನೆಯ ಕಲ್ಯಾಣ ಪರ್ವವು ಜರುಗಲಿದ್ದು ಅಕ್ಟೋಬರ್ 18,19 ಮತ್ತು 20ರಂದು ನಡೆಯಲಿದೆ.

ಶರಣ(ಶನಿ)ವಾರ, ದಿ. 18ರಂದು ಬೆಳಿಗ್ಗೆ 10-30ಕ್ಕೆ ಉದ್ಘಾಟನೆ ಮತ್ತು ಸಾಮೂಹಿಕ ಪ್ರಾರ್ಥನೆ, ಮಧ್ಯಾಹ್ನ 3-30ರಿಂದ 5-30ರವರೆಗೆ ರಾಷ್ಟ್ರೀಯ ಬಸವ ದಳದ ಸಮಾವೇಶ ; ಸಂಜೆ -6-30ರಿಂದ ಚಿಂತನಗೋಷ್ಠಿ. ದಿ.19 ದೇವ(ಭಾನು)ವಾರದಂದು ಬೆಳಿಗ್ಗೆ 07-30ಕ್ಕೆ ಶರಣ ವಂದನೆ-ಶರಣರಿಗೆ ಶರಣಾರ್ಥಿ, ಬೆಳಿಗ್ಗೆ 10-30ಕ್ಕೆ ಸಾಮೂಹಿಕ ಪ್ರಾರ್ಥನೆ ಮಧ್ಯಾಹ್ನ 3-30ರಿಂದ 5-30ರವರೆಗೆ ಆಶುಭಾಷಣ ಸ್ಪರ್ಧೆ, ಸಂಜೆ 6-30ರಿಂದ ಚಿಂತನಗೋಷ್ಠಿ ದಿ.20 ಶಿವ(ಸೋಮ)

ವಾರದಂದು ಅಕ್ಕನಾಗಲಾಂಬಿಕೆಯ ಸಂಸ್ಮರಣೆಯ ನಿಮಿತ್ತ ಬಸವ ಧರ್ಮ ವಿಜಯೋತ್ಸವ ಕಾರ್ಯಕ್ರಮ ನಂತರ ಅಲ್ಲಮಪ್ರಭು ಶೂನ್ಯ ಪೀಠಾರೋಹಣ ಮತ್ತು ಸಮಾರೋಪ ಸಮಾರಂಭ ಜರುಗಲಿವೆ.

ಕಲ್ಯಾಣ (ಗಣ) ಪರ್ವಕ್ಕೆ ಧನ ಸಹಾಯ

ಕಲ್ಯಾಣ ಎಂಬುದು ಒಂದು ಸ್ಥಳದ ಹೆಸರು; ಮತ್ತು ವಿಶ್ವಗುರು ಬಸವಣ್ಣನವರ ಧ್ಯೇಯವೇ ಎಲ್ಲ ಮಾನವರ ಲೇಸು -ಕಲ್ಯಾಣ. ಆದರ್ಶ ಕಲ್ಯಾಣ ರಾಜ್ಯ (Welfare state) ನಿರ್ಮಾಣವೇ ಅವರ ಹೋರಾಟದ ಗುರಿಯಾಗಿತ್ತು. ಗಣ ಎಂದರೆ ಸಮೂಹ, ಪರ್ವ ಎಂದರೆ ಹಬ್ಬ, ಶರಣ ಗಣವು ಶರಣ ಭೂಮಿ ಬಸವ ಕಲ್ಯಾಣದಲ್ಲಿ ನೆರೆದು ಆದಿ ಶರಣರ ಜೀವನ-ಸಾಧನೆ-ಸಂದೇಶಗಳನ್ನು ಕೊಂಡಾಡುವ ಹಬ್ಬ ಈ ಕಲ್ಯಾಣ ಪರ್ವ. ಅಂದು ಧರ್ಮಪಿತ ಬಸವಣ್ಣನವರು ಗಣಪರ್ವಗಳನ್ನು ಕಲ್ಯಾಣದಲ್ಲಿ ನಡೆಸುತ್ತಿದ್ದು, ಭಕ್ತರು ಅಂಗ, ವಂಗ, ಕಳಿಂಗ, ಗುರ್ಜರ, ಸಿಂಹಳ ಮುಂತಾದ ಭಾಗಗಳಿಂದೆಲ್ಲ ಸಮಾವೇಶವಾಗುತ್ತಿದ್ದುದಾಗಿ ಹರಿಹರ, ಸಿಂಗಿರಾಜ ಮುಂತಾದವರು ತಮ್ಮ ಕಾವ್ಯಗಳಲ್ಲಿ ಬಣ್ಣಿಸುತ್ತಾರೆ. ಅಂಥ ಗಣಪರ್ವವನ್ನು ಇಂದು ನೀವು ನಾವು ಮಾಡಿ ತೋರಿಸಬೇಕಾಗಿದೆ. ಅಕ್ಟೋಬರ್ 17ರ ರಾತ್ರಿಯಿಂದ ಅಕ್ಟೋಬರ್ 21 ರ ಬೆಳಗಿನವರೆಗೆ ಕಲ್ಯಾಣ ಪರ್ವದಲ್ಲಿ ಸಮಾವೇಶವಾಗುವ ಶರಣ ಬಂಧುಗಳಿಗೆ ವಸತಿ ಮತ್ತು ಪ್ರಸಾದದ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಮುಂದೆ ಸೂಚಿಸಿದಂತೆ ಧನ ಸಹಾಯ ಮಾಡಬಹುದು. ಶರಣ ಬಂಧುಗಳು ಒಂದು ಹೊತ್ತಿನ ಪ್ರಸಾದ ದಾಸೋಹದ ವೆಚ್ಚವನ್ನು ಭರಿಸಲೂ ಅವಕಾಶ ಉಂಟು.

1. ಮಹಾಪೋಷಕರು	: 10000 ರೂ. ಮತ್ತು ಮೇಲೆ ಕೊಟ್ಟವರು
2. ಪೋಷಕರು	: 5000 ರೂ. ಮತ್ತು ಮೇಲೆ ಕೊಟ್ಟವರು
3. ದಾನಿಗಳು	: 2000 ರೂ. ಮತ್ತು ಮೇಲೆ ಕೊಟ್ಟವರು
4. ಹಿತೈಷಿಗಳು	: 1000 ರೂ
5. ಸ್ವಾಗತ ಸಮಿತಿ ಸದಸ್ಯತ್ವ	: 500 ರೂ
6. ಪ್ರತಿನಿಧಿ ಶುಲ್ಕ	: 150 ರೂ.

ಅನ್ನದಾಸೋಹಕ್ಕಾಗಿ ಭಕ್ತಿಪೂರ್ವಕ ಕಾಣಿಕೆಗಳನ್ನು ಶಕ್ತ್ಯಾನುಸಾರ ಕೊಡಬಹುದು.

ವಿ.ಸೂ. : ವಾರ್ಷಿಕ ಸಮಾವೇಶವಾದ ಕಲ್ಯಾಣಪರ್ವಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/10000 ರೂಪಾಯಿಗಳ ಪುದುವಟ್ಟು (F.D) ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಕಲ್ಯಾಣಪರ್ವದ ದಾಸೋಹಕ್ಕೆ ವಿನಿಯೋಗಿಸಲಾಗುವುದು. ರಸೀತಿ ಪುಸ್ತಕ, ಕರಪತ್ರಗಳನ್ನು ಪಡೆದು ದೇಣಿಗೆ ಸಂಗ್ರಹಿಸುವವರಿಗೂ ಅವಕಾಶವಿದೆ.

ಇನ್‌ಕಮ್ ಟ್ಯಾಕ್ಸದಲ್ಲಿ 80ಜಿ ರಿಯಾಯಿತಿಯ ಸೌಲಭ್ಯವೂ ಇದೆ.

ಸಂಪರ್ಕಿಸುವ ವಿಳಾಸಗಳು

ಪೂಜ್ಯ ಶ್ರೀ ಮಹಾಜಗದ್ಗುರು
ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಬಸವ ಧರ್ಮ ಪೀಠ (ರಿ.)
ಬಸವ ಮಂಟಪ, 2035, 20ನೆಯ ಮುಖ್ಯರಸ್ತೆ,
2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010
☎ 080-22923736/9448137508

ಪೂಜ್ಯ ಶ್ರೀ ಜಗದ್ಗುರು ಸಿದ್ಧರಾಮೇಶ್ವರ ಸ್ವಾಮಿಗಳು
ಪೀಠಾಧ್ಯಕ್ಷರು, ಅಲ್ಲಮಪ್ರಭು ಶೂನ್ಯ ಪೀಠ
ಬಸವ ಧರ್ಮ ಪೀಠ (ರಿ.)
ಬಸವ ಮಹಾಮನೆ, ಬಸವ ಕಲ್ಯಾಣ-585 327
ತಾ-ಬಸವಕಲ್ಯಾಣ, ಜಿ-ಬೀದರ್
☎ 08481-252856/9448732456

ಅಕ್ಕನ ಅಮರವಾಣಿ

– ಮಾತಾಜಿ

ಭಾಗ-9

161. ಜಂಗಮಕ್ಕೆ ಮೊದಲು ಅರ್ಪಿತ

ನಾನುಣ್ಣದ ಮುನ್ನವೆ ಜಂಗಮಕ್ಕೆ
ಅಮೃತಾನ್ನಾದಿ ನೈವೇದ್ಯವ ನೀಡುವೆ.
ನಾನುಡದ ಮುನ್ನವೆ ಜಂಗಮಕ್ಕೆ
ದೇವಾಂಗಾದಿ ವಸ್ತ್ರವನುಡಿಸುವೆ.
ನಾನು ಹೂಸದ ಮುನ್ನವೆ ಜಂಗಮಕ್ಕೆ
ಸುಗಂಧಾದಿ ಪರಿಮಳದ್ರವ್ಯವ ಹೂಸುವೆ.
ನಾನು ಮುಡಿಯದ ಮುನ್ನವೆ ಜಂಗಮಕ್ಕೆ
ಪರಿಪರಿಯ ಪುಷ್ಪವ ಮುಡಿಸುವೆ.
ನಾನು ತೊಡದ ಮುನ್ನವೆ
ಜಂಗಮಕ್ಕೆ ತೊಡಿಗೆಯ ತೊಡಿಸುವೆ.
ನಾನಾವಾವ ಭೋಗವ ಭೋಗಿಸುವ ಮುನ್ನವೆ ಜಂಗಮಕ್ಕೆ ಭೋಗಿಸಲಿತ್ತು,
ಆ ಶೇಷ ಪ್ರಸಾದವ ಲಿಂಗಕ್ಕಿತ್ತು
ಭೋಗಿಸಿದ ಬಳಿಕಲ್ಲದೆ ಭೋಗಿಸಿದಡೆ
ಬಸವಣ್ಣಾ, ನಿಮ್ಮಾಣೆಯಯ್ಯಾ ಚೆನ್ನಮಲ್ಲಿಕಾರ್ಜುನದೇವರ ದೇವಾ

ಮನೆಗೆ ಜಂಗಮರು ಬಂದಾಗ ಅವರಿಗೆ ಮೊದಲು ಉಣ್ಣಿಸಿ ನಂತರ ತಾವು ಉಣ್ಣಬೇಕು. ಜಂಗಮಕ್ಕೆ ಉಡಲು ವಸ್ತ್ರಗಳನ್ನು ಕೊಡಬೇಕು. ಸುಗಂಧಾದಿ ಪರಿಮಳ ದ್ರವ್ಯದಿಂದ ಪಾದಗಳನ್ನು ತೊಳೆಯಬೇಕು. ಹೂಮಾಲೆಯನ್ನು ಹಾಕಿ, ಪಾದಗಳನ್ನು ಹೂವಿನಿಂದ ಅಲಂಕರಿಸಬೇಕು. ಜಂಗಮರು ಎಂದರೆ ವೈರಾಗ್ಯ ಸಾಧಕರು. ವಿರಕ್ತ ಮಾರ್ಗದ ಪ್ರಕಾರ ಅವರು ಆಭರಣಗಳನ್ನು ತೊಡುವುದಕ್ಕೆ ಅವಕಾಶವಿಲ್ಲ. ಪರಿಮಳ ದ್ರವ್ಯಗಳನ್ನು ಅವರು ಬಳಸುವಂತಿಲ್ಲ. ಈ ವಾಕ್ಯಗಳಿಂದ ಈ ವಚನವು ನಂತರ ಬರೆದು ಸೇರಿಸಲ್ಪಟ್ಟ ವಚನ ಇರಬೇಕೆಂಬ ಸಂದೇಹ ಬರುತ್ತದೆ.

ಯಾವಾವ ಭೋಗವನ್ನು ನಾನು ಅನುಭವಿಸುವೆನೋ ಅದನ್ನು ಮೊದಲು ಜಂಗಮಕ್ಕೆ ನೀಡಿ ಉಪಯೋಗಿಸುವೆ. ಹಾಗೆ ಮಾಡದಿದ್ದರೆ ಬಸವಣ್ಣಾ, ನಿಮ್ಮಾಣೆ ಎನ್ನುತ್ತಾರೆ ಅಕ್ಕನವರು.

162 ಲಿಂಗ ಜಂಗಮದ ಅವಹೇಳನ ಸಲ್ಲ

ಜಂಗಮದ ಕೈ ಹೊಯ್ದು ಹೊಯ್ದು ನಕ್ಕು ಕೆಟ್ಟರಯ್ಯಾ!
ಸರಸದಲ್ಲಿ ಮುಟ್ಟಿ ಪೂಜಿಸುವರೆ ನಿಮಗೆ ಲಿಂಗವಿಲ್ಲ.
ಹುತ್ತಿನೊಳಗೆ ಕೈಯನಿಕ್ಕೆ ಸರ್ಪದಂಷ್ಟ್ರವಾದರೆ
ಮತ್ತೆ ಗಾರುಡವುಂಟೆ ಚೆನ್ನಮಲ್ಲಿಕಾರ್ಜುನದೇವರ ದೇವಾ

ಕೆಲವರು ಜಂಗಮರ ಬಗ್ಗೆ ಆಡಿಕೊಳ್ಳುವರು. ಕೈ ಹೊಯ್ದು ಹೊಯ್ದು ಅಪಹಾಸ್ಯ ಮಾಡಿ ನಗುವರು ಇಂಥವರಿಗೆ ಭವಿಷ್ಯ ಕೆಟ್ಟದಾಗಿರುತ್ತದೆ. ಇಷ್ಟಲಿಂಗದ ಬಗ್ಗೆ ಹಗುರವಾಗಿ

ಮಾತನಾಡುತ್ತ ಪೂಜಿಸುವರು. ಅವರಿಗೆ ದೇವರು ಒಲಿಯನು. ಹುತ್ತದೊಳಗೆ ಕೈಯನಿಟ್ಟು ಹಾವು ಕಚ್ಚಿದಂತೆ ಇಂಥ ನಿಂದಕರ ಪರಿಸ್ಥಿತಿ. ಇಂಥ ನಿಂದನೆಯಿಂದ ಬರುವ ಪಾಪಕ್ಕೆ ಪರಿಹಾರವೇ (ಗಾರುಡ)ಇಲ್ಲ.

163. ಪಂಚ ತೀರ್ಥ

ನಡೆಶುಚಿ, ನುಡಿಶುಚಿ, ತನುಶುಚಿ, ಮನಶುಚಿ, ಭಾವಶುಚಿ.
ಇಂತೀ ಪಂಚ ತೀರ್ಥಂಗಳನೊಳಕೊಂಡು ಮರ್ತ್ಯದಲ್ಲಿ ನಿಂದ
ನಿಮ್ಮ ಶರಣರ ತೋರಿ ಎನ್ನನುಳುಹಿಕೊಳ್ಳಾ
ಚೆನ್ನಮಲ್ಲಿಕಾರ್ಜುನದೇವರ ದೇವಾ!

ನಡೆಯಲ್ಲಿ ಅಂದರೆ ನಡತೆಯಲ್ಲಿ, ಆಚಾರದಲ್ಲಿ ಶುಚಿಯಾಗಿ, ನುಡಿಯಲ್ಲಿ ಅಂದರೆ ಮಾತಿನಲ್ಲಿ, ವಚನ ಪರಿಪಾಲನೆಯಲ್ಲಿ ಶುಚಿಯಾಗಿ, ಸತ್ಯ ಶುದ್ಧ ಕಾಯಕವನ್ನು ಮಾಡುತ್ತ, ಸದಾಚಾರ ಸಂಪನ್ನರಾಗಿ ತನುವಿನಲ್ಲಿ ಶುಚಿಯಾಗಿ, ಇಷ್ಟಲಿಂಗೋಪಾಸನೆ, ದೇವರ ಧ್ಯಾನ ಮಾಡುತ್ತ ಮನ ಶುಚಿಯಾಗಿ, ಸದಾ ಉತ್ತಮವಾದ ದೈವೀಚಿಂತನೆಯನ್ನು ಮಾಡುತ್ತ ಭಾವ ಶುಚಿಯಾಗಿ-ಇಂತಹ ಪಂಚ ತೀರ್ಥಂಗಳನ್ನು ಒಳಗೊಂಡ ಶರಣರು ಪವಿತ್ರಾತ್ಮರು. ಇಂಥ ಪವಿತ್ರಾತ್ಮರ ದರ್ಶನ ಮತ್ತು ಸ್ಪರ್ಶನ ಅತ್ಯಂತ ಶ್ರೇಷ್ಠ. ಆದ್ದರಿಂದ ಅಂಥ ಶರಣರನ್ನು ತೋರಿಸಿ ನನ್ನ ಜೀವನವನ್ನು ಸಾರ್ಥಕಗೊಳಿಸು ಪರಮಾತ್ಮ ಎಂದು ಅಕ್ಕನವರು ಲಿಂಗದೇವನಲ್ಲಿ ಬೇಡುತ್ತಾರೆ.

164. ಶರಣರ ಒಡನಾಟ

ಸತ್ಯಸದ್ಭಕ್ತರ ಸಂಭಾಷಣೆ ನುಡಿಗಡಣವೆಂಬುದು
ನಿಚ್ಚಲೊಂದು ಉಪದೇಶ ಮಂತ್ರವ ಕಲಿತಂತೆ.
ಬಚ್ಚಬರಿಯ ಭವಿಗಳ ಸಂಗದಲ್ಲಿದ್ದರೆ
ಕಿಚ್ಚಿನೊಳಗೆ ಬಿದ್ದ ಕೀಡೆಯಂತಿಪ್ಪುದಯ್ಯ.
ಸಮಚಿತ್ತದಿಂದ ನಿಮ್ಮ ಸದ್ಭಕ್ತರ ಸಂಗದಲ್ಲಿರಿಸದಿರ್ದಡೆ
ನಾನಿನ್ನೆತ್ತ ಸಾರುವೆನು ಹೇಳಾ ಚೆನ್ನಮಲ್ಲಿಕಾರ್ಜುನದೇವರ ದೇವಾ?

ಸತ್ಯವಾದಿಗಳಾದ ಸದ್ಭಕ್ತರೊಡನೆ ಮಾಡುವ ಸಂಭಾಷಣೆ, ಅವರ ಅಮೂಲ್ಯ ಮಾತುಗಳು ದಿನ್ಯನಿತ್ಯವೂ ಒಂದು ಉಪದೇಶ ಮಂತ್ರವನ್ನು ಕಲಿತಂತೆ. ಏಕೆಂದರೆ ಅವರು ಕುಳಿತಲ್ಲಿ, ನಿಂತಲ್ಲಿ, ಸಂಭಾಷಣೆ ಮಾಡುವಲ್ಲಿ ಉತ್ತಮ ವಿಚಾರಗಳನ್ನೇ ಪ್ರಸ್ತಾಪಿಸುತ್ತಾರೆ ಅಜ್ಞಾನಿಗಳಾದ ಭವಿಗಳ ಸಂಗ ಕಿಚ್ಚಿನೊಳಗೆ ಬಿದ್ದ ಕೀಡೆಯ ಪರಿಸ್ಥಿತಿಯಂತೆ. ದೇವಾ, ನೀನು ನನ್ನನ್ನು ಸದ್ಭಕ್ತರ ಸಂಗದಲ್ಲಿ ಇರಿಸದೆ ಇದ್ದರೆ ನಾನು ಇನ್ನು ಎತ್ತ ಹೋಗಬೇಕು? ದಿಕ್ಕು ತಪ್ಪಿ ಬಿಡುತ್ತೇನೆ ಅಷ್ಟೆ.

165. ದೇವರ ಕೃಪಾದೃಷ್ಟಿ

ಉಣಲೆಂದು ಬಂದ ಸುಖ ಉಂಡಲ್ಲದೆ ಹರಿಯದು.
ಕಾಣಲೆಂದು ಬಂದ ದುಃಖ ಕಂಡಲ್ಲದೆ ಹರಿಯದು.
ತನುವಿಂಗೆ ಬಂದ ಕರ್ಮ ಹರಿಯುವ ಕಾಲಕ್ಕೆ
ಚೆನ್ನಮಲ್ಲಿಕಾರ್ಜುನದೇವನ ದೇವರು ಕಡೆಗಣ್ಣಿನಿಂದ ನೋಡಿದರು

ಅರಮನೆಯ ವಿಷಮ ವಾತಾವರಣದಿಂದ ಕಂಗೆಟ್ಟ ಅಕ್ಕನವರು ಮಾನಸಿಕವಾಗಿ ಚಿತ್ರ ಹಿಂಸೆ ಅನುಭವಿಸುತ್ತಿದ್ದಾರೆ. ತಮತಮಗೆ ಸಮಾಧಾನ ಹೇಳಿಕೊಳ್ಳುತ್ತಿದ್ದಾರೆ. ನಮ್ಮ ಜೀವನದಲ್ಲಿ ಅನುಭವಿಸಬೇಕು ಎಂದು ನಿಗದಿಯಾದ ಸುಖವು ಅನುಭವಿಸಿದಲ್ಲದೆ ಸವೆಯದು. ಅದೇ ರೀತಿ ಅನುಭವಿಸಬೇಕೆಂದು ನಿಗದಿಯಾದ ದುಃಖ ಅನುಭವಿಸಿದಲ್ಲದೆ ಸವೆಯದು. ಅವು ಹಿಂದಿನ ಜನ್ಮದಲ್ಲಿ ಕಟ್ಟಿಟ್ಟುಕೊಂಡ ಬುತ್ತಿ. ನಮ್ಮ ಶರೀರಕ್ಕೆ ಬಂದೆರಗಿನ ಕರ್ಮ ಹರಿಯುವ ಕಾಲಕ್ಕೆ ದೇವರು ತನ್ನ ಕಣ್ಣಿನ ತುದಿಯಿಂದ ನೋಡಿದರೂ ಸಾಕು. ಅಲ್ಲಿಯವರೆಗೆ ಬಂದುದನ್ನು ಅನುಭವಿಸಲೇಬೇಕು.

166. ಬಂಧನ ಬಿಡಿಸಲು ಮೊರೆ

ಪುಣ್ಯಪಾಪಂಗಳನರಿಯದ ಮುನ್ನ,
ಅನೇಕ ಭವಂಗಳಲ್ಲಿ ಬಂದೆನಯ್ಯಾ!
ಬಂದು ಬಂದು ನೊಂದು ಬೆಂದೆನಯ್ಯಾ!
ಬಂದು ನಿಮ್ಮ ನಂಬಿ ಶರಣುಪೊಕ್ಕೆನಯ್ಯಾ!
ನಿಮ್ಮನೆಂದು ಅಗಲದಂತೆ ಮಾಡಿ ನಡೆಸಯ್ಯಾ
ನಿಮ್ಮ ಧರ್ಮ ನಿಮ್ಮ ಧರ್ಮ.
ನಿಮ್ಮಲೊಂದು ಬೇಡುವೆನು,
ಎನ್ನ ಬಂಧನ ಬಿಡುವಂತೆ ಮಾಡಯ್ಯಾ,
ಚೆನ್ನಮಲ್ಲಿಕಾರ್ಜುನದೇವರ ದೇವಾ

ಲೌಕಿಕ ಮಾನವರು ಅನೇಕರಿಗೆ ಪುಣ್ಯ-ಪಾಪಗಳ ವ್ಯತ್ಯಾಸವೇ ಗೊತ್ತಿರುವುದಿಲ್ಲ. ಅವರು ಪುಣ್ಯವೆಂದೇ ತಿಳಿದು ಪಾಪ ಕರ್ಮಗಳನ್ನು ಮಾಡುತ್ತಾರೆ. ಉದಾಹರಣೆಗೆ ಬೇರೆ ಬೇರೆ ಜಾತಿಯ ಹುಡುಗ-ಹುಡುಗಿಯರು ಪರಸ್ಪರ ಪ್ರೇಮಿಸಿದರೆ ಅದು ಅವರ ಜಾತಿಗೆ ಆದ ಅವಮಾನವೆಂದು ಭಾವಿಸಿ "ಮರ್ಯಾದಾ ಹತ್ಯೆ" ಎಂದು ಪ್ರೇಮಿಗಳನ್ನು ಕೊಂದೇ ಹಾಕುತ್ತಾರೆ. ಇದು ಪಾಪ ಕಾರ್ಯ ಎಂಬ ಅರಿವೇ ಅಂಥವರಿಗೆ ಇರುವುದಿಲ್ಲ.

ಮೊದಲು ಪುಣ್ಯ-ಪಾಪಗಳ ವ್ಯತ್ಯಾಸವನ್ನು ನಾನು ತಿಳಿದಿರದೆ ಅನಂತ ಜನ್ಮಗಳಲ್ಲಿ ಹುಟ್ಟಿ ಬಂದಿದ್ದೇನೆ. ಸಾಕಷ್ಟು ಜನ್ಮಗಳಲ್ಲಿ ಬಂದು ಬಂದು ನೊಂದು ಭವದ ಅಗ್ನಿಯಲ್ಲಿ ಬೆಂದಿದ್ದೇನೆ. ಪೂರ್ವ ಸುಕೃತದಿಂದ ಅರಿವು ಉಂಟಾಗಿ ಈ ಜನ್ಮದಲ್ಲಿ ನಿಮಗೆ ಶರಣು ಹೊಕ್ಕಿದ್ದೇನೆ. ಇನ್ನು ಮುಂದೆ ನಾನು ನಿನ್ನನ್ನು ಅಗಲಬಾರದು. ಈಗ ಒಂದೇ ಬೇಡಿಕೆ ನನ್ನದು. 'ನನಗೊದಗಿದ ಬಂಧನ ಬಿಡುವಂತೆ ಮಾಡು.' ಎಂಬುದು. ಇಲ್ಲಿ ಬಂಧನ ಬಿಡುವಂತೆ ಮಾಡು ಎಂಬ ಬೇಡಿಕೆಯಲ್ಲಿ ಎರಡು ಅರ್ಥಗಳಿವೆ. 1. ಅರಮನೆಯ ಬಂಧನ, 2. ಜೀವಾತ್ಮನ ಬಂಧನ. ಒಬ್ಬ ಮುಮುಕ್ಷುವಾಗಿ ಜೀವಕ್ಕೆ ಒದಗಿದ ಬಂಧನ ಬಿಡುವಂತೆ ಮಾಡು ಎಂದು ಅಕ್ಕನವರು ದೇವರಲ್ಲಿ ಬೇಡುವುದು ಅತ್ಯಂತ ಸಹಜವಾಗಿದೆ.

167. ಶರಣ ಸಂಗದ ಹಂಬಲ

ಅಯ್ಯಾ, ಕತ್ತಲೆಯ ಕಳೆದುಳಿದ ಸತ್ಯಶರಣರ
ಪರಿಯನೇನೆಂಬೆನಯ್ಯಾ?
ಘನವನೊಳಕೊಂಡ ಮನದ ಮಹಾನುಭಾವಿಗಳ

ಬಳಿವಿಡಿದು ಬದುಕುವೆನಯ್ಯಾ
ಅಯ್ಯಾ, ನಿನ್ನಲ್ಲಿ ನಿಂದು ಬೇರೊಂದರಿಯದ
ಲಿಂಗಸುಖಿಗಳ ಸಂಗದಲ್ಲಿ ದಿನವ ಕಳೆಯಿಸಯ್ಯಾ
ಚೆನ್ನಮಲ್ಲಿಕಾರ್ಜುನದೇವರ ದೇವಾ.

ಅಜ್ಞಾನ, ಮರೆವು ಎನ್ನುವುದು ಮನಸ್ಸಿಗೆ ಕವಿದ ಘೋರ ಕತ್ತಲೆಯಾಗಿದೆ. ಅಜ್ಞಾನ ಕತ್ತಲೆ ಕಳೆದುಕೊಂಡು ಪರಮಾತ್ಮನೆಂಬ ಘನ ಚೈತನ್ಯವನ್ನು ಮನದಲ್ಲಿ ತುಂಬಿಕೊಂಡು ಮಹಾನುಭಾವಿಗಳಾದ ಶರಣರ ಸನಿಹಕ್ಕೆ ಹೋಗಿ ನಾನು ಬದುಕುವೆ. ದೇವಾ, ನಿನ್ನಲ್ಲಿ ಮನಸ್ಸನ್ನು ನಿಲ್ಲಿಸಿ ಬೇರೆ ಯಾವ ಲೌಕಿಕ ವ್ಯವಹಾರದ ಕಡೆ ಗಮನವಿರದ ಲಿಂಗಸುಖಿಗಳ ಸಂಗಕ್ಕೆ ನನ್ನನ್ನು ಸೇರಿಸಿ, ನನ್ನ ಆಯುಷ್ಯದ ದಿನಗಳು ಸಾರ್ಥಕವಾಗುವಂತೆ ಮಾಡು.

168. ಶರಣ ದರ್ಶನಕ್ಕೆ ಹಂಬಲ

ಅಯ್ಯಾ, ನಿಮ್ಮ ಶರಣರ ಬರವಿಂಗೆ
ಗುಡಿ ತೋರಣವ ಕಟ್ಟುವೆ.
ಅಯ್ಯಾ ನಿಮ್ಮ ಶರಣರ ಬರವಿಂಗೆ
ಮುಡುಹುವಿನಲ್ಲಿ ಪಟ್ಟವ ಕಟ್ಟುವೆ.
ಅಯ್ಯಾ, ನಿಮ್ಮ ಶರಣರೆನ್ನ ಮನೆಗೆ ಬಂದಡೆ,
ಅವರ ಶ್ರೀಪಾದವನ್ನೆ ಹೃದಯದಲ್ಲಿ ಬಗೆದಿಟ್ಟುಕೊಂಬೆ
ಕಾಣಾ, ಚೆನ್ನಮಲ್ಲಿಕಾರ್ಜುನದೇವರ ದೇವಾ.

ಅರಮನೆಯ ಬಂಧನಕ್ಕೆ ಒಳಗಾಗುವ ಮೊದಲು ಅಕ್ಕನವರು ಕೆಲವು ಕರಾರುಗಳನ್ನು ಹಾಕಿದ್ದರು. ಗುರು ಲಿಂಗ ಜಂಗಮ ಪೂಜೆಗೆ ಅಡ್ಡಿ ಮಾಡಬಾರದೆಂಬುದು ಆ ಕರಾರು. ಹೀಗಾಗಿ ಶರಣರಿಗೆ, ಜಂಗಮರಿಗೆ ಅರಮನೆಗೆ ಮುಕ್ತ ಅವಕಾಶವಿತ್ತು. ಅವರು ಬಂದು ನಡೆಸುವ ಅನುಭವಗೋಷ್ಠಿಗಳು ಅಕ್ಕನವರಿಗೆ ಅಮೃತಬಿಂದುಗಳಾಗಿದ್ದವು. ಹಾಗೆ ಬಂದ ಶರಣರು, ಜಂಗಮರು ಕಲ್ಯಾಣದ ವಾರ್ತೆಯನ್ನು ತರುತ್ತಿದ್ದರು. ವಚನಗಳ ಕಟ್ಟುಗಳನ್ನು ತಂದು ಕೊಡುತ್ತಿದ್ದರು. ಅಂಥ ಶರಣರ ಬರುವಿಗಾಗಿ ಅಕ್ಕನವರು ಹಂಬಲ ತುಂಬಿ ಕಾಯುತ್ತಿದ್ದರು.

"ಅಯ್ಯಾ, ಶರಣರು ಬರುವರೆಂದು ಮನೆಯ ಮುಂದೆ ಧ್ವಜ (ಗುಡಿ)ವನ್ನು ಹಾರಿಸುವೆ. ತಲೆ ಬಾಗಿಲಲ್ಲಿ ಹಸಿರು ತೋರಣ ಕಟ್ಟುವೆ. (ಮುಡುಹಿನಲ್ಲಿ ಪಟ್ಟ ಕಟ್ಟುವೆ ಎಂದು ಇಲ್ಲಿ ಬಂದಿದೆ. ಅದರಂತೆ ಗುರು ಬಸವಣ್ಣನವರ ವಚನದಲ್ಲೂ ಬಂದಿದೆ. ಮುಡುಹು ಎಂದರೆ ಭುಜ ಎಂದು ಅರ್ಥವಿದೆ. ಭುಜದಲ್ಲಿ ಪಟ್ಟ ಕಟ್ಟುವುದು ಎನ್ನುವುದು ನಮ್ಮ ಕಲ್ಪನೆಗೆ ಬರುತ್ತಿಲ್ಲ. ಯಾರಾದರೂ ಗೊತ್ತಿದ್ದರೆ ಬರೆದು ತಿಳಿಸಿರಿ) ಅವರು ಬಂದಾಗ ಅವರ ಶ್ರೀಪಾದವನ್ನು ನನ್ನ ಹೃದಯದಲ್ಲಿ ಬಗೆದು ಇಟ್ಟುಕೊಳ್ಳುವೆ."

169. ಜಂಗಮದ ತಿಂಥಿಣಿಯಲ್ಲಿ ಆನಂದ

ಜಂಗಮವೆನ್ನ ಪ್ರಾಣ, ಜಂಗಮವೆನ್ನ ಜೀವ,
ಜಂಗಮವೆನ್ನ ಪುಣ್ಯದ ಫಲ, ಜಂಗಮವೆನ್ನ ನಿಧಿನಿಧಾನ.

ಜಂಗಮವೆನ್ನ ಹರುಷದ ಮೇರೆ.
ಚೆನ್ನಮಲ್ಲಿಕಾರ್ಜುನದೇವರ ದೇವಾ
ಜಂಗಮದ ತಿಂಥಿಣಿಯಲ್ಲಿ ಓಲಾಡುವೆನು.

ಸತ್ಯ ಸದಾಚಾರ ಸಂಪನ್ನರಾಗಿ ಬಸವ ಪಥದಲ್ಲಿ ನಡೆಯುವ ಗೃಹಸ್ಥರು–ಶರಣರು; ವೈರಾಗ್ಯ ಜೀವನವನ್ನು ಅವಲಂಬಿಸಿದವರು ಜಂಗಮರು. ಧರ್ಮ ಪ್ರಚಾರವೇ ಜಂಗಮರ ಕಾಯಕವಾಗಿತ್ತು.

" ಜಂಗಮವೆನ್ನ ಪ್ರಾಣ ಸ್ವರೂಪರು, ಅವರ ಬರುವು ನನಗೆ ಜೀವದ ಬರುವು. ನಾನು ಮಾಡಿದ ಪುಣ್ಯದ ಫಲವಾಗಿ ಅವರು ದರ್ಶನ ಕೊಡುವರು. ಅವರೇ ನನ್ನ ಸಂತೋಷ, ಸಂಭ್ರಮಕ್ಕೆ ಒಂದು ಎಲ್ಲೆ. ಜಂಗಮರ ಸಮೂಹದಲ್ಲಿ ನಾನು ಸಂತೋಷದಿಂದ ಓಲಾಡುವೆನು."

170. ಶರಣರ ಸಂಗದಿಂದ ದುಃಖಕ್ಕೆ ವಿಶ್ರಾಂತಿ

ಸುಖದ ಸುಖಿಗಳ ಸಂಭಾಷಣೆಯಿಂದ
ದುಃಖಕ್ಕೆ ವಿಶ್ರಾಮವಾಯಿತ್ತು.
ಭಾವಕ್ಕೆ ತಾರ್ಕಣೆಯಾದಲ್ಲಿ,
ನೆನಹಕ್ಕೆ ವಿಶ್ರಾಮವಾಯಿತ್ತು.
ಬೆಚ್ಚುಬೆರಸಲೊಡನೆ ಮಚ್ಚು ಒಳಗೊಂಡಿತ್ತಯ್ಯಾ,
ಚೆನ್ನಮಲ್ಲಿಕಾರ್ಜುನದೇವರ ದೇವಯ್ಯಾ, ನಿಮ್ಮ ಶರಣರ ಸಂಗದಿಂದ.

ಆಧ್ಯಾತ್ಮಿಕ ಪಥದಲ್ಲಿ ಆನಂದ ಹೊಂದುತ್ತಿರುವವರು ಸ್ವತಃ ಭೇಟಿಯಾಗಿ ಸಂಭಾಷಣೆ ಮಾಡಿದರೆ ದುಃಖಕ್ಕೆ ವಿಶ್ರಾಂತಿ ಸಿಕ್ಕಿ ಮನಸ್ಸು ಮುದಗೊಳ್ಳುವುದು. ಪರಸ್ಪರರ ಭಾವ ಒಂದಾದರೆ ಹಿಂದಿನ ಕಹಿ ನೆನಪುಗಳಿಗೆ ಅಂತ್ಯ ಸಿಗುವುದು. ರಕ್ತ ಸಂಬಂಧಕ್ಕಿಂತ ಭಕ್ತಿ ಸಂಬಂಧ ಬಹಳ ಶ್ರೇಷ್ಠ. ಶರಣರ ಸಂಗದಲ್ಲಿ ಪ್ರೀತಿಯಿಂದ ಒಡನಾಡಿದಾಗ ಆಧ್ಯಾತ್ಮಿಕ ಸಂಬಂಧ ಗಟ್ಟಿಗೊಳ್ಳುವುದು. ಶರಣರ ಸಂಗದಿಂದ ಲಿಂಗದೇವನ ಮೇಲಿನ ಪ್ರೀತಿಯೂ ಹೆಚ್ಚಾಗುವುದು.

171. ಸದ್ಗೋಷ್ಠಿಯ ಪರಿಣಾಮ

ನೋಡಿ ನುಡಿಸಿ ಮಾತನಾಡಿದಡೊಂದು ಸುಖ.
ಏನ ಮಾಡದಯ್ಯಾ ನಿಮ್ಮ ಶರಣರ ಅನುಭಾವ?
ಚೆನ್ನಮಲ್ಲಿಕಾರ್ಜುನದೇವರ ದೇವಯ್ಯಾ,
ನಿಮ್ಮ ಶರಣರ ಸದ್ಗೋಷ್ಠಿ ಏನ ಮಾಡದಯ್ಯಾ?

ಅರಮನೆಯ ಬಂಧನದ ಮರುಭೂಮಿಯಲ್ಲಿದ್ದ ಅಕ್ಕನವರಿಗೆ ಶರಣರ ಸಂಗವು ಒಂದು ಓಯಸಿಸ್‌ನಂತೆ, ಮಾನಸಿಕ ಹಿಂಸೆಯಿಂದ ಬಿಡುಗಡೆ ಕೊಡುತ್ತಿತ್ತು, ಅದನ್ನು ಇಲ್ಲಿ ಬಣ್ಣಿಸಿದ್ದಾರೆ. "ಶರಣರನ್ನು ನೋಡುವುದು ಒಂದು ಸುಖ; ಅವರನ್ನು ನುಡಿಸಿ ಮಾತನಾಡಿದರೆ ಆ ಸುಖವು ವೃದ್ಧಿಯಾಗುವುದು. ಶರಣರ ಅನುಭಾವ ಸಾಧಿಸದಿರುವುದು ಏನು? ದೇವಾ, ನಿಮ್ಮ ಶರಣರ ಸದ್ಗೋಷ್ಠಿ ಸಾಧಿಸದಿರುವುದು ಏನು?

172. ಜಂಗಮ ಲಿಂಗದ ಶ್ರೇಷ್ಠತೆ

ಊಡಿದಡುಣ್ಣದು, ನೀಡಿದಡೊಲಿಯದು.

ಕಾಡದು ಬೇಡದು ಒಲಿಯದು ನೋಡಾ.
ಊಡಿದಡುಂಡು ನೀಡಿದಡೊಲಿದು ಬೇಡಿದ ವರವ ಕೊಡುವ
ಜಂಗಮಲಿಂಗದ ಪಾದವ ಕಂಡು ಬದುಕಿದೆ ಕಾಣಾ,
ಚೆನ್ನಮಲ್ಲಿಕಾರ್ಜುನದೇವರ ದೇವಾ

"ಉಣ್ಣಲಿಕ್ಕಿದರೆ ಉಣ್ಣದು, ನೀಡಿದರೆ ಒಲಿಯದು. ಕಾಡುವುದಿಲ್ಲ, ಬೇಡವುದಿಲ್ಲ, ಒಲಿಯುವುದೂ ಇಲ್ಲ. ಇಷ್ಟಲಿಂಗದೇವನ ಪರಿಸ್ಥಿತಿ ಹೀಗಿದೆ. ಉಣಲಿಕ್ಕಿದರೆ ಉಂಡು, ಕಾಣಿಕೆಗಳನ್ನು ನೀಡಿದಡೆ ಒಲಿದು ಭಕ್ತರಿಗೆ ಬೇಡಿದ ವರವನ್ನು ಕೊಡುವ ಜಂಗಮಲಿಂಗದಿಂದ ನಾನು ಉದ್ಧಾರವಾದೆ."

ಜಂಗಮದ ಪರಿಕಲ್ಪನೆ ಲಿಂಗಾಯತ ಧರ್ಮದ ಪ್ರಕಾರ ವಿಶೇಷವಾಗಿದೆ. ಜಂಗಮನೆಂದರೆ ಯೋಗಿ, ತ್ಯಾಗಿ, ಧರ್ಮ ಪ್ರಚಾರಕ, ಮನೋವಿಜ್ಞಾನಿ, ನ್ಯಾಯಾಧೀಶ, ಮಿತ್ರ, ಹಿತಚಿಂತಕ. ಭಕ್ತರಿಗೆ ಸಂಕಷ್ಟ ಬಂದಾಗ ಅವರಿಗೆ ಅನುಗ್ರಹಿಸಿ ಕಷ್ಟಗಳನ್ನು ಪರಿಹರಿಸುತ್ತಾನೆ. ಸಾಂತ್ವನ ಹೇಳುತ್ತಾನೆ. ಧೈರ್ಯಗೆಟ್ಟಾಗ ಆತ್ಮಸ್ಥೈರ್ಯ ತುಂಬುವ ಹಿತಚಿಂತಕ. ಭಕ್ತರ ಮಧ್ಯೆ ಸಂಘರ್ಷ ಉಂಟಾದಾಗ ಜಗಳವನ್ನು ಪರಿಹರಿಸುವ ನ್ಯಾಯಾಧೀಶ. ಭಕ್ತನ ಜೀವನದಲ್ಲಿ ಜಂಗಮನ ಪಾತ್ರ ಬಹಳ ಹಿರಿದು.

173. ಭೃತ್ಯಾಚಾರ

ಭೃತ್ಯನಾದ ಬಳಿಕ ಕರ್ತೃವಿಂಗೆ ಉತ್ತಮ ವಸ್ತುವನೀಯಬೇಕು,
ಇದೇ ಕರ್ತೃಭೃತ್ಯ ಭೇದ.
ಲಿಂಗಭಕ್ತನಾದಡೆ ಜಂಗಮಪಾದತೀರ್ಥಪ್ರಸಾದವ
ಲಿಂಗಕ್ಕೆ ಮಜ್ಜನ, ಭೋಜನ ನೈವೇದ್ಯವ ಮಾಡಿ,
ಪ್ರಸಾದವ ಕೊಳ್ಳಬೇಕು.
ಇದೇ ಮರ್ಮ ಇದೇ ಧರ್ಮ ಕಾಣಾ
ಚೆನ್ನಮಲ್ಲಿಕಾರ್ಜುನದೇವರ ದೇವಾ

ಜಂಗಮವೆಂದರೆ ಕರ್ತೃ, ಭಕ್ತನು ಭೃತ್ಯ ಸಾಮಾನ್ಯವಾಗಿ ಕೆಲವರು ತಮಗೆ ಬೇಡವಾದ ವಸ್ತುಗಳನ್ನು ದಾನ ಕೊಡುವುದುಂಟು. ಲಿಂಗಾಯತ ಧರ್ಮಾಚಾರದ ಪ್ರಕಾರ ಜಂಗಮಕ್ಕೆ ಉತ್ತಮ ವಸ್ತುಗಳನ್ನು ಕೊಡಬೇಕು. ಇಷ್ಟಲಿಂಗ ಪೂಜಕರು ಜಂಗಮದ ಪಾದ ತೀರ್ಥವನ್ನು ತಮ್ಮ ಇಷ್ಟಲಿಂಗದ ಮೇಲೆರೆದು ಸ್ವೀಕರಿಸಬೇಕು. ಜಂಗಮ ಪ್ರಸಾದವನ್ನು ಇಷ್ಟಲಿಂಗಕ್ಕೆ ನೈವೇದ್ಯ ಮಾಡಿ ಸ್ವೀಕರಿಸಬೇಕು. ಇದೇ ಮರ್ಮ, ಇದೇ ಧರ್ಮ ಎಂದು ಅಕ್ಕನವರು ಹೇಳುತ್ತಾರೆ.

ಬದಲಾದ ಕಾಲ ಮಾನಕ್ಕನುಸರಿಸಿ ಕೆಲವು ತಿದ್ದುಪಡಿಗಳು ಧರ್ಮದಲ್ಲಿ ಅಗತ್ಯವೆಂದು ಶರಣ ಮೇಳದ ಚಿಂತನಗೋಷ್ಠಿಯಲ್ಲಿ ಚಿಂತಿಸಿ, ಚರ್ಚಿಸಿ, ನಿರ್ಣಯಕ್ಕೆ ಬರಲಾಗಿದೆ. ಜಂಗಮರು ಅವರು ಎಷ್ಟೇ ದೊಡ್ಡವರಿರಲಿ ಅವರ ಪಾದೋದಕವನ್ನು ಜಂಗಮರಿಗಿಂತಲೂ ದೊಡ್ಡವನಾದ ಸೃಷ್ಟಿಕರ್ತ ಲಿಂಗದೇವನ ಕುರುಹಾದ ಇಷ್ಟಲಿಂಗದ ಮೇಲೆ ಎರೆಯಬಾರದು. ಜಂಗಮರು ತಮ್ಮ ಪಾದೋದಕ ಕೊಡುವ ಬದಲು ಹಸ್ತೋದಕವನ್ನು ಮಾಡಿ ಭಕ್ತರ ಇಷ್ಟಲಿಂಗದ ಮೇಲೆ ಎರೆಯಬೇಕು.

174. ಜಂಗಮೋಪಚಾರ

ಲಾಂಛನ ಸಹಿತ ಮನೆಗೆ ಬಂದಡೆ,
ತತ್ಕಾಲವನರಿದು ಪ್ರೇಮವ ಮಾಡದಿರ್ದಡೆ
ನೀನಿರಿಸಿದ ಮನೆಯ ತೊತ್ತಲ್ಲ.
ತತ್ಕಾಲ ಪ್ರೇಮವ ಮಾಡುವಂತೆ ಎನ್ನಮುದ್ದ ಸಲಿಸಯ್ಯಾ
ಅಲ್ಲದೊಡೆ ಒಯ್ಯಯ್ಯ ಸಿರಿಶೈಲಚೆನ್ನಮಲ್ಲಿಕಾರ್ಜುನದೇವರ ದೇವಾ.

ತ್ಯಾಗದ ಕುರುಹಾದ ಕಾಷಾಯ ವಸ್ತ್ರಧರಿಸಿ, ವಿಭೂತಿ ರುದ್ರಾಕ್ಷಿಗಳ ತೊಡುಗೆ ತೊಟ್ಟು ಜಂಗಮರು ಮನೆಗೆ ಬಂದರೆ ಸಮಯೋಪಚಾರ ಮಾಡಬೇಕು. ಬಂದ ಸಮಯವನ್ನು ಅರಿತು ಸ್ನಾನ ಪೂಜೆ ಪ್ರಸಾದ ಮಾಡಿಸಬೇಕು. ಆ ರೀತಿ ಮಾಡದಿದ್ದರೆ ನಾನು ನೀನಿರಿಸಿದ ಮನೆಯ ತೊತ್ತಲ್ಲ. ಅಂಥ ಭಕ್ತಿ ಮಾಡುವಂತೆ ನನಗೆ ಪ್ರೇರಣೆ ನೀಡು, ಅಲ್ಲದಿದ್ದೊಡೆ ನನಗೆ ಸಾವು ಬರಲಿ.

175. ಜಂಗಮ ಸೇವೆಗೆ ವಿಘ್ನಬೇಡ

ಬಿಡು ಬಿಡು ಸಂಗವ, ಸುಡುಸುಡು ವಿಷಯವ,
ಎನ್ನೊಡೆಯರು ಬಾಗಿಲಿಗೆ ಬಂದರು,
ತಡೆಯದಿರಾ ಮರುಳೆ.
ಹಡಿಕೆಯ ಸಂಸಾರದ ಸುಖವ ಕಡೆಯಲ್ಲಿ ಹೇಸಿ,
ಇದಕ್ಕೆ ಹಿಡಿಯದಿರು ಸೆರಗನು.
ಚೆನ್ನಮಲ್ಲಿಕಾರ್ಜುನದೇವನ ದೇವರು ಮನೆಗೆ ಬಂದಲ್ಲಿ
ಇದಿರೇಳದಿರ್ದಡೆ ನಾಯಕ ನರಕ.

ಅನುಭಾವವನ್ನು ನಡೆಸಲೆಂದು ಜಂಗಮರು ಅರಮನೆಗೆ ಬಂದಾಗ ಅಕ್ಕಮಹಾದೇವಿ ಅವರನ್ನು ಸ್ವಾಗತಿಸಲು ಹೋಗುವಾಗ ಕೌಶಿಕನು ಅದಕ್ಕೆ ಅವಕಾಶ ಕೊಡದೆ ಸೀರೆಯ ಸೆರಗು ಹಿಡಿದು ಹಿಂದಕ್ಕೆ ಎಳೆಯುವನು. ಆಗ ಕ್ರೋಧ ತಪ್ತರಾಗಿ ಅಕ್ಕನವರು ಈ ವಚನ ಹೇಳಿದ್ದಾರೆ.

"ಎಲೈ ಕಾಮಾತಿರೇಕದಿಂದ ಹುಚ್ಚನಾದ ರಾಜನೆ, ಬಿಡು ಕಾಮದ ಸಂಗವ, ವಿಷಯ ವಾಸನೆಯನ್ನು ಸುಡು. ಎನ್ನೊಡನೆಯರು ಜಂಗಮರು. ಅವರು ಬಂದು ಬಾಗಿಲಲ್ಲಿ ನಿಂದಾಗ ಅವರನ್ನು ನಾನು ಗೌರವ ಪೂರ್ವಕವಾಗಿ ಸ್ವಾಗತಿಸಬೇಕು. ನನ್ನನ್ನು ತಡೆಯಬೇಡ. ನಿನಗೆ ಕ್ಷುಲ್ಲಕವಾದ ಸಂಸಾರ ಸುಖದ ಬಗ್ಗೆ ಹೇಸಿಕೆ ಹುಟ್ಟಲಿ. ನನ್ನ ಸೆರಗನ್ನು ಬಿಡು. ದೇವರ ಪ್ರತಿನಿಧಿಗಳಾದ ಜಂಗಮರು ಮನೆಗೆ ಬಂದಾಗ ಇದಿರು ಹೋಗಿ ವಂದಿಸಿ ಕರೆತರದಿದ್ದರೆ ನಾಯಕ ನರಕ ಪ್ರಾಪ್ತಿಯಾಗುವುದು.

(ಮುಂದುವರಿಯುವುದು)

ಆದಿ ಶರಣರ ಸ್ಮರಣೆ

ಜಯ ಜಯ ಘನಲಿಂಗ ಜಯ ಜಯ ಮಂಗಳಾಂಗ
ಜಯತು ಜಯ ಬಸವ ಗುರು ಪ್ರಾಣೇಶ ಲಿಂಗ
ಜಯ ಭಕ್ತ ವತ್ಸಲ ಇಷ್ಟ ಪ್ರದಾಯಕ
ಜಯ ಸಚ್ಚಿದಾನಂದ ಜಯ ಲಿಂಗದೇವ ॥

1. ಸೃಷ್ಟಿಕರ್ತ ಲಿಂಗದೇವನಿಗೆ ಶರಣು, ಶರಣು ಶರಣಾರ್ಥಿ
2. ಲಿಂಗಾಯತ ಧರ್ಮಕರ್ತ ಗುರು ಬಸವಣ್ಣನವರಿಗೆ ಶರಣು, ಶರಣು ಶರಣಾರ್ಥಿ
3. ಶೂನ್ಯಪೀಠಾಧೀಶ ಅಲ್ಲಮಪ್ರಭುದೇವರಿಗೆ ಶರಣು, ಶರಣು ಶರಣಾರ್ಥಿ
4. ಚಿನ್ಮಯಜ್ಞಾನಿ ಚನ್ನಬಸವಣ್ಣನವರಿಗೆ ಶರಣು, ಶರಣು ಶರಣಾರ್ಥಿ
5. ಲಿಂಗಾಂಗಯೋಗಿ ಸಿದ್ಧರಾಮೇಶ್ವರರಿಗೆ ಶರಣು, ಶರಣು ಶರಣಾರ್ಥಿ
6. ವೀರ ವಿರಾಗಿಣಿ ಅಕ್ಕಮಹಾದೇವಿಗೆ ಶರಣು, ಶರಣು ಶರಣಾರ್ಥಿ
7. ವೀರ ಗಣಾಚಾರಿ ಮಡಿವಾಳ ಮಾಚಿದೇವರಿಗೆ ಶರಣು, ಶರಣು ಶರಣಾರ್ಥಿ
8. ಕ್ರಾಂತಿ ಗಂಗೋತ್ರಿ ಅಕ್ಕನಾಗಲಾಂಬಿಕಾ ತಾಯಿಗೆ ಶರಣು, ಶರಣು ಶರಣಾರ್ಥಿ
9. ದಾಸೋಹಮೂರ್ತಿ ನೀಲಾಂಬಿಕಾ ತಾಯಿಗೆ ಶರಣು, ಶರಣು ಶರಣಾರ್ಥಿ
10. ಹುತಾತ್ಮ ಚೇತನ ಹರಳಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
11. ಧೀರ ಶರಣೆ ಕಲ್ಯಾಣಮ್ಮ ತಾಯಿಗೆ ಶರಣು, ಶರಣು ಶರಣಾರ್ಥಿ
12. ಧೀರ ಶರಣ ಮಧುವರಸರಿಗೆ ಶರಣು, ಶರಣು ಶರಣಾರ್ಥಿ
13. ಧೀರ ಶರಣ ಶೀಲವಂತಯ್ಯನಿಗೆ ಶರಣು, ಶರಣು ಶರಣಾರ್ಥಿ
14. ಧೀರ ಶರಣೆ ಲಾವಣ್ಯವತಿಗೆ ಶರಣು, ಶರಣು ಶರಣಾರ್ಥಿ
15. ಪರಮ ಪ್ರಸಾದಿ ಡೋಹಾರ ಕಕ್ಕಯ್ಯನವರಿಗೆ ಶರಣು, ಶರಣು ಶರಣಾರ್ಥಿ
16. ತತ್ವನಿಷ್ಠುರಿ ಅಂಬಿಗ ಚೌಡಯ್ಯನವರಿಗೆ ಶರಣು, ಶರಣು ಶರಣಾರ್ಥಿ
17. ರಾಜಯೋಗಿ ಮೋಳಿಗೆ ಮಾರಯ್ಯನವರಿಗೆ ಶರಣು, ಶರಣು ಶರಣಾರ್ಥಿ
18. ಆದರ್ಶಸತಿ ಮೋಳಿಗೆ ಮಹಾದೇವಮ್ಮ ತಾಯಿಗೆ ಶರಣು, ಶರಣು ಶರಣಾರ್ಥಿ
19. ಅಂಗಸೋಂಕಿನ ಲಿಂಗ ತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
20. ಅಣತಿಯ ಚಂದಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
21. ಅಗ್ಘವಣಿಯ ಹಂಪಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
22. ಹಡಪದ ಅಪ್ಪಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
23. ನಿಜಲಿಂಗಯೋಗಿ ಅಜಗಣ್ಣ ತಂದೆಗಳಿಗೆ ಶರಣು, ಶರಣು ಶರಣಾರ್ಥಿ
24. ಅನಾಮಿಕ ನಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
25. ಅಪ್ಪಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
26. ಅಮರ ಗುಂಡದ ಮಲ್ಲಿಕಾರ್ಜುನ ತಂದೆಗೆ ಶರಣು, ಶರಣು ಶರಣಾರ್ಥಿ
27. ಸ್ವಾಭಿಮಾನ ನಿಧಿ ಅಮುಗಿದೇವಯ್ಯನಿಗೆ ಶರಣು, ಶರಣು ಶರಣಾರ್ಥಿ
28. ಅರಿವಿನ ಮಾರಿ ತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
29. ಅವಸರದ ರೇಕಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
30. ಸೌರಾಷ್ಟ್ರದ ಆದಯ್ಯ ಶರಣರಿಗೆ ಶರಣು, .ಶರಣು ಶರಣಾರ್ಥಿ
31. ಆನಂದಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
32. ಆಯ್ದಕ್ಕಿ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
33. ನಿಸ್ವಾರ್ಥಸತಿ ಆಯ್ದಕ್ಕಿ ಲಕ್ಕಮ್ಮ ಶರಣೆಗೆ ಶರಣು, ಶರಣು ಶರಣಾರ್ಥಿ
34. ಉಗ್ಘಡಿಸುವ ಗಬ್ಬಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ

35. ಉಪ್ಪರಗುಡಿಯ ಸೋಮಿದೇವಯ್ಯನಿಗೆ ಶರಣು, ಶರಣು ಶರಣಾರ್ಥಿ
36. ಮಹಾಜ್ಞಾನಿ ಉರಿಲಿಂಗದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
37. ಚಿನ್ಮಯ ಶರಣ ಉರಿಲಿಂಗಪೆದ್ದಿ ಗುರುವಿಗೆ ಶರಣು, ಶರಣು ಶರಣಾರ್ಥಿ
38. ಉಳಿಯುಮೇಶ್ವರ ಚಿಕ್ಕಣ್ಣನವರಿಗೆ ಶರಣು, ಶರಣು ಶರಣಾರ್ಥಿ
39. ಎಚ್ಚರಿಕೆ ಕಾಯಕದ ಮುಕ್ತಿನಾಥಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
40. ಎಲೆಗಾರ ಕಾಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
41. ಏಕಾಂತದ ರಾಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
42. ಏಲೇಶ್ವರದ ಕೇತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
43. ಒಕ್ಕಲಿಗ ಮುದ್ದಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
44. ಕಳಿಂಗದೇಶದ ಸುಜ್ಞಾನಿದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
45. ಲಮಾಣಿ ನಾಯಕ ನನ್ನಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
46. ಗುಡ್ಡಾಪುರದ ದಾನಮ್ಮ ತಾಯಿಗೆ ಶರಣು, ಶರಣು ಶರಣಾರ್ಥಿ
47. ವಚನಕಾರ್ತಿ ಅಕ್ಕಮ್ಮ ಶರಣೆಗೆ ಶರಣು, ಶರಣು ಶರಣಾರ್ಥಿ
48. ಜ್ಞಾನನಿಧಿ ವೀರಸಂಗವ್ವೆ ಶರಣೆಗೆ ಶರಣು, ಶರಣು ಶರಣಾರ್ಥಿ
49. ಉದಾರ ಹೃದಯಿ ಚಂಗಳೆ ತಾಯಿಗೆ ಶರಣು, ಶರಣು ಶರಣಾರ್ಥಿ
50. ಲಿಂಗಪ್ರಾಣಿ ಕಮಳವ್ವೆ ಶರಣೆಗೆ ಶರಣು, ಶರಣು ಶರಣಾರ್ಥಿ
51. ಭಕ್ತಿನಿಧಿ ಶರಣೆ ಸೋಮವ್ವೆಗೆ ಶರಣು, ಶರಣು ಶರಣಾರ್ಥಿ
52. ಸದಾಚಾರ ಸಂಪನ್ನೆ ಚೊಳಿಯಕ್ಕನಿಗೆ ಶರಣು, ಶರಣು ಶರಣಾರ್ಥಿ
53. ಜಂಗಮ ದಾಸೋಹಿ ನಿಂಬಿಯಕ್ಕನಿಗೆ ಶರಣು, ಶರಣು ಶರಣಾರ್ಥಿ
54. ದಾಸಿಮಯ್ಯಗಳ ಸತಿ ದುಗ್ಗಳೆಗೆ ಶರಣು, ಶರಣು ಶರಣಾರ್ಥಿ
55. ಶರಣ ಪ್ರೇಮಿ ಸುಗ್ಗಲವ್ವ ತಾಯಿಗೆ ಶರಣು, ಶರಣು ಶರಣಾರ್ಥಿ
56. ಧೀರ ಶರಣೆ ಅಮುಗೆ ರಾಯಮ್ಮ ಶರಣೆಗೆ ಶರಣು, ಶರಣು ಶರಣಾರ್ಥಿ
57. ಉರಿಲಿಂಗ ಪೆದ್ದಿಗಳ ಪುಣ್ಯ ಸ್ತ್ರೀ ಶರಣೆ ಕಾಳವ್ವೆಗೆ ಶರಣು, ಶರಣು ಶರಣಾರ್ಥಿ
58. ನಾಗಿಮಯ್ಯಗಳ ಪುಣ್ಣ ಸ್ತ್ರೀ ಮಸಣಮ್ಮನಿಗೆ ಶರಣು, ಶರಣು ಶರಣಾರ್ಥಿ
59. ಕದಿರೆಯ ಕಾಯಕದ ಶರಣೆ ಕಾಳವ್ವೆಗೆ ಶರಣು, ಶರಣು ಶರಣಾರ್ಥಿ
60. ಕದಿರೆ ರೆಮ್ಮವ್ವೆ ಶರಣೆಗೆ ಶರಣು, ಶರಣು ಶರಣಾರ್ಥಿ
61. ಕನ್ನಡಿ ಕಾಯಕದ ಶರಣೆ ರೇಮಮ್ಮನಿಗೆ ಶರಣು, ಶರಣು ಶರಣಾರ್ಥಿ
62. ಕಾಟಕೂಟಯ್ಯಗಳ ಪುಣ್ಯ ಸ್ತ್ರೀ ಶರಣೆ ರೇಚವ್ವೆಗೆ ಶರಣು, ಶರಣು ಶರಣಾರ್ಥಿ
63. ಕಾಲಕಣ್ಣಿಯ ಕಾಯಕದ ಶರಣೆ ತಾಯಮ್ಮನಿಗೆ ಶರಣು, ಶರಣು ಶರಣಾರ್ಥಿ
64. ಕೊಂಡೆ ಮಂಚಣ್ಣಗಳ ಪುಣ್ಣ ಸ್ತ್ರೀ ಲಕ್ಷ್ಮಮ್ಮನಿಗೆ ಶರಣು, ಶರಣು ಶರಣಾರ್ಥಿ
65. ಕೊಟ್ಟಣ ಕಾಯಕದ ಶರಣೆ ಸೋಮಮ್ಮನಿಗೆ ಶರಣು, ಶರಣು ಶರಣಾರ್ಥಿ
66. ಗಜೇಶ ಮಸಣಯ್ಯಗಳ ಪುಣ್ಯ ಸ್ತ್ರೀ ಶರಣೆಗೆ ಶರಣು, ಶರಣು ಶರಣಾರ್ಥಿ
67. ಗುಂಡಯ್ಯಗಳ ಪುಣ್ಯ ಸ್ತ್ರೀ ಕೇತಲದೇವಿಗೆ ಶರಣು, ಶರಣು ಶರಣಾರ್ಥಿ
68. ಡೋಹರ ಕಕ್ಕಯ್ಯನವರ ಪುಣ್ಯ ಸ್ತ್ರೀ ಭಿಷ್ಟಾದೇವಿಗೆ ಶರಣು, ಶರಣು ಶರಣಾರ್ಥಿ
69. ಶರಣೆ ಗೊಗ್ಗವ್ವೆಗೆ ಶರಣು, ಶರಣು ಶರಣಾರ್ಥಿ
70. ದಸರಯ್ಯಗಳ ಪುಣ್ಯ ಸ್ತ್ರೀ ವೀರಮ್ಮಗೆ ಶರಣು, ಶರಣು ಶರಣಾರ್ಥಿ
71. ಬತ್ತಲೇಶ್ವರಯ್ಯಗಳ ಪುಣ್ಯ ಸ್ತ್ರೀ ಗುಡ್ಡವ್ವೆಗೆ ಶರಣು, ಶರಣು ಶರಣಾರ್ಥಿ
72. ಬಾಚಿಕಾಯಕದ ಬಸವಯ್ಯಗಳ ಪುಣ್ಯ ಸ್ತ್ರೀ ಕಾಳವ್ವೆಗೆ ಶರಣು, ಶರಣು ಶರಣಾರ್ಥಿ
73. ನಿಜ ಮುಕ್ತೆ ಶರಣೆ ಮುಕ್ತಾಯಕ್ಕಗೆ ಶರಣು, ಶರಣು ಶರಣಾರ್ಥಿ

74. ರಾಯಸದ ಮಂಚಣ್ಣಗಳ ಪುಣ್ಯ ಸ್ತ್ರೀ ಕಾಳವ್ವೆಗೆ ಶರಣು, ಶರಣು ಶರಣಾರ್ಥಿ
75. ಕಾಶ್ಮೀರದ ರಾಜಪುತ್ರಿ ಬೊಂತಾದೇವಿಗೆ ಶರಣು, ಶರಣು ಶರಣಾರ್ಥಿ
76. ರೇವಣಸಿದ್ಧಯ್ಯಗಳ ಪುಣ್ಯ ಸ್ತ್ರೀ ರೇಕಮ್ಮನಿಗೆ ಶರಣು, ಶರಣು ಶರಣಾರ್ಥಿ
77. ಧೀಮಂತ ಶರಣೆ ಸತ್ಯಕ್ಕನಿಗೆ ಶರಣು, ಶರಣು ಶರಣಾರ್ಥಿ
78. ಸಿದ್ಧಬುದ್ಧಯ್ಯಗಳ ಪುಣ್ಯ ಸ್ತ್ರೀ ಕಾಳವ್ವೆಗೆ ಶರಣು, ಶರಣು ಶರಣಾರ್ಥಿ
79. ಸದಾಚಾರ ಪಥ ಹಿಡಿದ ಸೂಳೆ ಸಂಕವ್ವೆಗೆ ಶರಣು, ಶರಣು ಶರಣಾರ್ಥಿ
80. ಹಡಪದ ಅಪ್ಪಣ್ಣಗಳ ಪುಣ್ಯ ಸ್ತ್ರೀ ಲಿಂಗಮ್ಮ ತಾಯಿಗೆ ಶರಣು, ಶರಣು ಶರಣಾರ್ಥಿ
81. ಮಾರಯ್ಯಗಳ ಪುಣ್ಯ ಸ್ತ್ರೀ ಗಂಗಮ್ಮನಿಗೆ ಶರಣು, ಶರಣು ಶರಣಾರ್ಥಿ
82. ಸತ್ಯಸದಾಚಾರದ ಪಥ ಹಿಡಿದ ಮಾಯಿದೇವಿಗೆ ಶರಣು, ಶರಣು ಶರಣಾರ್ಥಿ
83. ನಾಗಲಾಂಬಿಕಾ ಪತಿ ಶಿವದೇವಯ್ಯನಿಗೆ ಶರಣು, ಶರಣು ಶರಣಾರ್ಥಿ
84. ಎಳೆವರೆಯದಲ್ಲೇ ಲಿಂಗದೊಡಗೂಡಿದ ಬಾಲ ಸಂಗಯ್ಯನಿಗೆ ಶರಣು, ಶರಣು ಶರಣಾರ್ಥಿ
85. ಕಂಬದ ಮಾರಿ ತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
86. ಕನ್ನಡಿ ಕಾಯಕದ ಅಮ್ಮಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
87. ಕನ್ನದ ಮಾರಿ ತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
88. ಕರುಳ ಕೇತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
89. ಕಲಕೇತ ಶರಣರಿಗೆ ಶರಣು, ಶರಣು ಶರಣಾರ್ಥಿ
90. ಕಾಮಾಟದ ಭೀಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
91. ಕಿನ್ನರಿ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
92. ಕೀಲಾರದ ಬೊಮ್ಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
93. ಕೇದಾರ ಗುರು ಶರಣರಿಗೆ ಶರಣು, ಶರಣು ಶರಣಾರ್ಥಿ
94. ಕೂಗಿನ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
95. ಕೊಟಾರದ ಸೋಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
96. ಕೋಲ ಶಾಂತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
97. ಗಜೇಶ ಮಸಣಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
98. ಗಣದಾಸಿ ವೀರಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
99. ರಾಯಸದ ಮಂಚಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
100. ಗೋರಕ್ಷನಾಥ ಶರಣರಿಗೆ ಶರಣು, ಶರಣು ಶರಣಾರ್ಥಿ
101. ತೆಲಗು ಜೊಮ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
102. ಶಿವಲೆಂಕ ಮಂಚಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
103. ಬೊಕ್ಕಸದ ಸಂಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
104. ಗಾಣದ ಕನ್ನಪ್ಪ ಶರಣರಿಗೆ ಶರಣು, ಶರಣು ಶರಣಾರ್ಥಿ
105. ಗಾವುದಿ ಮಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
106. ಗುಪ್ತ ಮಂಚಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
107. ಗುರುಪುರದ ಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
108. ಗುರುಭಕ್ತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
109. ಘಟ್ಟಿವಾಳಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
110. ಚಂದಿಮರಸ ಶರಣರಿಗೆ ಶರಣು, ಶರಣು ಶರಣಾರ್ಥಿ
111. ಜೇಡರ ದಾಸಿಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
112. ಜೋದರ ಮಾಯಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ

113. ಢಕ್ಕೆಯ್ಯ ಬೊಮ್ಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
114. ಗಣಪ್ರಸಾದಿ ಡೋಹರ ಕಕ್ಕಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
115. ತಳವಾರ ಕಾಮಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
116. ತುರುಗಾಹಿ ರಾಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
117. ತೆಲುಗೇಶ ಮಸಣಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
118. ದಶಗಣ ಸಿಂಗಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
119. ಅಹಿಂಸಾವಾದಿ ದಸರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
120. ದಾಸೋಹದ ಸಂಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
121. ನಗೆಯ ಮಾರಿತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
122. ನಿಜಗುಣ ಶಿವಯೋಗಿ ಶರಣರಿಗೆ ಶರಣು, ಶರಣು ಶರಣಾರ್ಥಿ
123. ನಿವೃತ್ತಿ ಸಂಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
124. ನಿಜಾನುಭಾವಿ ನುಲಿಯ ಚಂದಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
125. ರೇವಣ ಸಿದ್ಧ ಶರಣರಿಗೆ ಶರಣು, ಶರಣು ಶರಣಾರ್ಥಿ
126. ಮಲ್ಲಿಕಾರ್ಜುನ ಪಂಡಿತಾರಾಧ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
127. ಮರುಳುಸಿದ್ಧ ಶರಣರಿಗೆ ಶರಣು, ಶರಣು ಶರಣಾರ್ಥಿ
128. ಪುರದ ನಾಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
129. ಪ್ರಸಾದಿ ಭೋಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
130. ಪ್ರಸಾದಿ ಲೆಂಕ ಬಂಕಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
131. ಬಹುರೂಪಿ ಚೌಡಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
132. ಬಳ್ಳೇಶ ಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
133. ಬಾಚಿ ಕಾಯಕದ ಬಸವಪ್ಪ ಶರಣರಿಗೆ ಶರಣು, ಶರಣು ಶರಣಾರ್ಥಿ
134. ಬಾಲಬೋಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
135. ವಚನಕಾರ ಬಾಲ ಸಂಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
136. ಬಾಹೂರ ಬೊಮ್ಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
137. ಬಿಬ್ಬಿ ಬಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
138. ಬೊಕ್ಕಸದ ಚಿಕ್ಕಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
139. ಭರಿತಾರ್ಪಣದ ಚೆನ್ನಬಸವಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
140. ಭಿಕಾರಿ ಭೀಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
141. ಕೆಂಭಾವಿ ಭೋಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
142. ಮನಸಂದ ಮಾರಿ ತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
143. ಮನುಮುನಿ ಗುಮ್ಮಟದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
144. ಕಂದಹಾರದ ಮರುಳು ಶಂಕರದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
145. ಮಲಹರ ಕಾಯಕದ ಚಿಕ್ಕದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
146. ಮಹಾದೇವೀರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
147. ಮಳುಬಾವಿಯ ಸೋಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
148. ಮಾದಾರ ಚೆನ್ನಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
149. ಮರುಳು ಶಂಕರದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
150. ಚೋಳವ್ವೆ ಶರಣೆಗೆ ಶರಣು, ಶರಣು ಶರಣಾರ್ಥಿ
151. ಗುರುಕುಲದ ಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ

152.ಮಾದಾರ ಧೂಳಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
153.ಮಾರುಡುಗೆಯ ನಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
154.ಮಾರೇಶ್ವರೊಡೆಯ ಶರಣರಿಗೆ ಶರಣು, ಶರಣು ಶರಣಾರ್ಥಿ
155.ಮೆರೆ ಮಿಂಡಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
156.ಮೇದಾರ ಕೇತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
157.ಮೈದುನ ರಾಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
158.ರಕ್ಕಸ ಬೊಮ್ಮ ತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
159.ರಾಯಸದ ಮಂಚಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
160.ರೇಚದ ಬಂಕಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
161.ಲದ್ದೆಯ ಸೋಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
162.ವಚನ ಭಂಡಾರಿ ಶಾಂತರಸ ಶರಣರಿಗೆ ಶರಣು, ಶರಣು ಶರಣಾರ್ಥಿ
163.ವರದ ಸಂಕಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
164.ವೀರ ಗೊಲ್ಲಾಳ ಶರಣರಿಗೆ ಶರಣು, ಶರಣು ಶರಣಾರ್ಥಿ
165.ವೀರ ಶಂಕರದಾಸಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
166.ವೇದಮೂರ್ತಿ ಸಂಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
167.ವೈದ್ಯ ಸಂಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
168. ಶಂಕರ ದಾಸಿಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
169. ಕಂಬಳಿಯ ನಾಗಿದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
170. ಶಿವನಾಗಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
171. ಸಂಗಮೇಶ್ವರದ ಅಪ್ಪಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
172. ಸಕಲೇಶ ಮಾದರಸ ಶರಣರಿಗೆ ಶರಣು, ಶರಣು ಶರಣಾರ್ಥಿ
173. ಸಗರದ ಬೊಮ್ಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
174. ಸತ್ತಿಗೆ ಕಾಯಕದ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
175. ಸಿದ್ಧಾಂತಿ ವೀರ ಸಂಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
176. ಸಿಮ್ಮಲಿಗೆ ವೀರ ಚೆನ್ನಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
177. ಸೋಮದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
178. ಸುಂಕದ ಬಂಕಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
179. ಸೂಜಿಕಾಯಕದ ರಾಮಿತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
180. ಸೊಡ್ಡಳ ಬಾಚರಸ ಶರಣರಿಗೆ ಶರಣು, ಶರಣು ಶರಣಾರ್ಥಿ
181. ಹಡಪದ ರೇಚಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
182. ಹಾವಿನ ಹಾಳ ಕಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
183. ಹುಂಜಿನ ಕಾಳಗದ ದಾಸಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
184. ಹೆಂಡದ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
185. ಹೊಡೆಹುಲ್ಲ ಬಂಕಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
186. ಅಗ್ಘವಣಿಯ ಹೊನ್ನಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
187. ನಿಜ ವಿರಕ್ತ ನಿರ್ಲಜ್ಜ ಶಾಂತಿಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
188. ಸಗರದ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
189. ನಿಗಮದ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
190. ಕಲಕೇತ ಬ್ರಹ್ಮಗುರು ಶರಣರಿಗೆ ಶರಣು, ಶರಣು ಶರಣಾರ್ಥಿ

191. ಮೊರನ ವೇಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
192. ವಾರುಧಿ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
193. ವೀರಬಲ್ಲಾಳ ಶರಣರಿಗೆ ಶರಣು, ಶರಣು ಶರಣಾರ್ಥಿ
194. ನಿಜ ಲಿಂಗ ಚಿಕ್ಕಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
195. ಪಡಿಹಾರಿ ಉತ್ತಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
196. ಚಿಕ್ಕ ಮಾದಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
197. ಮುಗ್ಧ ಸಂಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
198. ಸದ್ಯೋನ್ಮುಕ್ತಿ ಶರಣ ಸತ್ಯಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
199. ಪುರದ ನಾಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
200. ರೇವಣಸಿದ್ಧರ ಸುಪುತ್ರ ರುದ್ರಮುನಿ ದೇವರಿಗೆ ಶರಣರಿಗೆ ಶರಣು, ಶರಣು ಶರಣಾರ್ಥಿ
201. ವೀರ ಶರಣ ಜಗದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
202. ಧೀರ ಶರಣ ಮಲ್ಲಿಬೊಮ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
203. ಹಿಪ್ಪರಿಗೆಯ ಶರಣ ಮಲ್ಲಿಕಾರ್ಜುನನಿಗೆ ಶರಣು, ಶರಣು ಶರಣಾರ್ಥಿ
204. ದಿಗಂಬರ ಮುಕ್ತಿ ಮುನಿ ಶರಣರಿಗೆ ಶರಣು, ಶರಣು ಶರಣಾರ್ಥಿ
205. ಸುಕುಮಾರ ಚೆನ್ನಬಸವೇಶ್ವರರಿಗೆ ಶರಣು, ಶರಣು ಶರಣಾರ್ಥಿ
206. ಶೂಲದ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
207. ಹೊಡೆಹುಲ್ಲ ಬಂಕನಾಥ ಶರಣರಿಗೆ ಶರಣು, ಶರಣು ಶರಣಾರ್ಥಿ
208. ಇಂಡಿಯ ಶಾಂತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
209. ಗೊಬ್ಬೂರ ಬಿಬ್ಬಿ ಬಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
210. ಸೂಗೂರ ಚೆನ್ನವೀರೇಶ್ವರ ಶರಣರಿಗೆ ಶರಣು, ಶರಣು ಶರಣಾರ್ಥಿ
211. ಅಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
212. ಎಡೆ ಮಠದ ನಾಗಿದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
213. ಕುಂಬಾರ ಗುಂಡಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
214. ಲಕ್ಕದ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
215. ಚಾಂಗುಬಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
216. ಶಿವಭಕ್ತ ಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
217. ಲೆಂಕ ಬೊಮ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
218. ಸಪ್ಪೆ ಯಲ್ಲಮ್ಮದೇವಿ ಶರಣೆಗೆ ಶರಣು, ಶರಣು ಶರಣಾರ್ಥಿ
219. ಹಾಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
220. ಭದ್ರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
221. ಒಕ್ಕಲಿಗ ಮಾರಗೌಡ ಶರಣರಿಗೆ ಶರಣು, ಶರಣು ಶರಣಾರ್ಥಿ
222. ಬಳ್ಳಿಗಾವಿಯ ಗೊಗ್ಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
223. ಮೊರಟದ ಬಂಕಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
224. ರಾಗರಸಾಂಕ ಶರಣರಿಗೆ ಶರಣು, ಶರಣು ಶರಣಾರ್ಥಿ
225. ಶಿವರಾತ್ರಿ ಸಂಕಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
226. ಮುಸುಡಿಯ ಚೌಡಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
227. ಗರಡಿಯ ಚೌಡಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
228. ಪುಲಿಗೆರೆಯ ಸೋಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
229. ನಾಗನಾಥ ಶರಣರಿಗೆ ಶರಣು, ಶರಣು ಶರಣಾರ್ಥಿ

230. ಆಡಿಕೇಶ್ವರ ಶರಣರಿಗೆ ಶರಣು, ಶರಣು ಶರಣಾರ್ಥಿ
231. ಮಡಿಕೇಶ್ವರ ಶರಣರಿಗೆ ಶರಣು, ಶರಣು ಶರಣಾರ್ಥಿ
232. ಬ್ಯಾಳಿ ಬಸವೇಶ್ವರ ಶರಣರಿಗೆ ಶರಣು, ಶರಣು ಶರಣಾರ್ಥಿ
233. ಬಡಿಹೋರಿ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
234. ಶಿವಯೋಗಿ ಮಲ್ಲರಸ ಶರಣರಿಗೆ ಶರಣು, ಶರಣು ಶರಣಾರ್ಥಿ
235. ಜಂಬೂರು ಮಹಾಕಾಳಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
236. ಅಮೋಘದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
237. ಢಂಕಣಿ ಕೋಟೆಯ ನೂರೊಂದಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
238. ಓಲೆಯ ಶಾಂತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
239. ತಾಳಿಕೋಟೆಯ ಶಿವದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
240. ಇಳಿಹಾಳ ಬೊಮ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
241. ವೀರ ಸಂಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
242. ತಂಗಟೂರು ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
243. ಗುಂಡ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
244. ರೇವಯ್ಯದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
245. ಸುರಗಿಯ ಚೌಡಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
246. ದಾಸೋಹ ರಾಯ ಶರಣರಿಗೆ ಶರಣು, ಶರಣು ಶರಣಾರ್ಥಿ
247. ವನಿಪುರದ ಶಂಕರದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
248. ವೆಲ್ಲಗೊಂಡದ ಮಹಾದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
